ಮನೆಯಲ್ಲಿ ನೆಮ್ಮದಿ ಯಿಂದ ಇರಲಾಗುತ್ತದೆಯೇ?.. ಸಕಲ ಸೌಭಾಗ್ಯವೂ ಇರಲಿ, ಮುತ್ತೈದೆ ಸಾವೇ ಬರಲಿ ಎಂದು ಅಷ್ಟೊಂದು ಪೂಜೆ ಪುನಸ್ಕಾರ ಮಾಡಿದ ಅಜ್ಜಿ ದಿನಬೆಳಗಾದರೆ ತಮಗೆ ವೈಧವ್ಯದ ಶಿಕ್ಷೆ ಇತ್ತ ದೇವರನ್ನು ಶಪಿಸುತ್ತಾ, ಹಳಿಯುತ್ತಾ ಅಳುತ್ತಾ ಇರುತ್ತಾರೆ. ಆದರೆ ಅತ್ತೆ, ನಾನು ಎಲ್ಲಾ ಪೂಜೆ ಮಾಡಬೇಕು.

ಬೇರೆ ಕೆಲಸವಿಲ್ಲದ ದೇವರು ನಮ್ಮ ಪೂಜೆ ಸ್ವೀಕರಿಸಲು, ಪ್ರಸಾದ ನೀಡಲು, ನಮ್ಮನ್ನು ಹರಸಲು ಕಾಯುತ್ತಿರುವ ಹಾಗೆ... ಪೂಜೆ ಮಾಡದಿದ್ದರೆ, ಲೆಕ್ಕ ಹಾಕಿ ಕೋಪಿಸಿಕೊಂಡು ಶಿಕ್ಷಿಸಲು ವಿಧಾನಗಳನ್ನು ಹುಡುಕುತ್ತಿರುವ ಹಾಗೆ... ಛೇ ಪಾಪಾ.. ದೇವರನ್ನು ತೀರಾ ಆ ಮಟ್ಟಕ್ಕೆ ಇಳಿಸುವುದು ಯಾವ ಧರ್ಮ..?... ನಮ್ಮ ಮನಃ ಶಾಂತಿಗೆ ಪೂಜೆ ಮಾಡಬೇಕು ಪೂಜೆಯಲ್ಲಿ ನೆಮ್ಮದಿ ಕಾಣಬೇಕು.

ಮುಂಚೆ ಹೀಗಿರಲ್ಲಿಲ್ಲ.. ಆದರೆ ಇತ್ತೀಚಿಗೆ ನನ್ನ ಮನಸ್ಸು ಪ್ರತಿಯೊಂದನ್ನು ಪ್ರಶ್ನಿಸುತ್ತದೆ. ಯಾವುದನ್ನು ಒಪ್ಪಿಕೊಳ್ಳದೆ ಚಂಡಿ ಹಿಡಿಯುತ್ತದೆ. ಏಕತಾನತೆ ಬೇಸರವನ್ನುಂಟು ಮಾಡುತ್ತಿದೆ.

ನಿಧಾನವಾಗಿ ಕೋಣೆಯತ್ತ ನಡೆದೆ. ಮಾವನವರ ಪಕ್ಕವಿದ್ದ ಅವರ ಮೊಬೈಲ್ ಹೊಡೆದುಕೊಳ್ಳಲಾರಂಭಿಸಿತು..

ರೂಮ್ ಬಾಗಿಲು ಹಾಕಿ, ಬಚ್ಚಲಿಗೆ ಹೋಗಿ ಆ ಬಾಗಿಲನ್ನು ಹಾಕಿಕೊಂಡೆ. ಹಿತ್ತಲ ಬಳಿ ಇರುವ ಬಚ್ಚಲಷ್ಟೆ ಹಳೆಯ ಬಚ್ಚಲು ಮನೆ, ಹಂಡೆ, ತೊಟ್ಟಿ, ಕಲ್ಲು ನೆಲ ಅಲ್ಲಿ. ಕೋಣೆಯಲ್ಲಿ ಇರುವುದು ಆಧುನಿಕ ಬಚ್ಚಲು.. ಶವರ್, ಟಬ್ಬು. ಟೈಲ್ಸ್.. ಎಲ್ಲಾ.. ನಿಧಾನವಾಗಿ ಸ್ನಾನ ಮುಗಿಸಿ ಹೊರಬಂದೆ.. ಶಾವಿಗೆ ಪಾಯಸ ಮಾಡಿ, ನೈವೇದ್ಯಕ್ಕೆ ಇಟ್ಟು ನಿಧಾನವಾಗಿ ಗೌರಿ ಪೂಜೆ ಮಾಡಿದೆ.

ಅವಳ್ಗೆ ಹೇಳಿದ್ಯಾ?.. ಮಾವನ ದನಿ.

ಸಂತೋಷ ಪಡೋರಿಗೆ ಹೇಳಬೇಕು.. ಪೂಜೆ ವ್ರತ ಮಾಡೋದೆಲ್ಲಾ ಅವನಿಗೆ ಶ್ರೇಯಸ್ಸಾಗಲಿ ಅಂತ.. ಆದ್ರೆ ಅವ್ನು ಏನು ಮಾಡಿದ್ರೂ ತಪ್ಪೇ ಹುಡುಕೋದು ಅವಳು.. ನೀವೂ, ಅವಳಿಗೆ ಹೇಳು ಅಂತ... ನೀವೇ ಹೇಳಿ... ಅತ್ತೆ ಉದ್ದಕ್ಕೆ ಹೇಳಿದಾಗ ಈ ಅವಳು ನಾನೇ ಎಂದು ಮನದಟ್ಟಾಯಿತು.

ಏನತ್ತೆ?... ಮೆಲುದನಿಯಲ್ಲಿ ಪ್ರಶ್ನಿಸಿದೆ.

ವಿಕ್ರಮ ಆಳುವ ಪಕ್ಷ ಸೇರ್ತಾನಂತೆ... ಎರಡೂ ಪಕ್ಷದವರೂ ಹಿಂದೆ ಬಿದ್ದಿದ್ರು... ಆಳುವ ಪಕ್ಷದವರು ಎಂ.ಎಲ್.ಎ ಸೀಟ್ ಗೆದ್ದ ತಕ್ಷಣ ಮಿನಿಸ್ಟರ್‌ಶಿಪ್ ಕೊಡ್ತೀವಿ ಅಂತ ಹೇಳಿದ್ದಾರಂತೆ... ಇವತ್ತು ಸಂಜೆ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ಕರೆದು ಪ್ರಕಟಿಸ್ತಾ ಇದಾನೆ. ಇವರಿಗೆ ಆಗ್ಲೆ ಫೋನ್ ಮಾಡಿ ಹೇಳ್ದೆ.. ನಿಂಗೆ ಹೇಳಕ್ಕೆ ಇವ್ರು ಚಡಪಡಿಸ್ತಾ ಇದ್ದಾರೆ.. ನಿಂಗೆ ಇದರಿಂದ ಸಂತೋಷವಿಲ್ಲ ಅಂತ ಇವ್ರಿಗೆ ಗೊತ್ತಿಲ್ಲ...

ಸಂತೋಷ ಹೇಗೆ ಇರುತ್ತೆ ಹೇಳಿ ಅತ್ತೆ?... ನಂಗೆ ಹೇಳಿಲ್ಲ.. ಕೇಳಿಲ್ಲ.. ನಾನು ಮಾತಾಡಿದರೆ ಸುಮ್ಮನಿರು ಅಂತಾರೆ.. ರಾಜಕೀಯ ಸೇರಿದರೆ ನಮ್ಮೆಲ್ಲರ ಬದುಕು ಏರುಪೇರಾಗುತ್ತೆ... ಈಗಲೇ ಇವರು ಮನೆ ಸೇರೋದು ಅಪರೂಪ.. ಶಾಲೆಯಿದೆ, ಕಾಲೇಜಿದೆ, ಛತ್ರವಿದೆ, ಲಾಡ್ಜಿದೆ ಜಮೀನಿದೆ... ಇದೆಲ್ಲಾ ನೋಡಿಕೊಳ್ಳುವುದು ಬೇಡವೇ? ಇವರು.

ಸಾಕು... ಮಾವನವರು ಮಧ್ಯೆ ದನಿ ಎತ್ತರಿಸಿದಾಗ ಉಗುಳು ನುಂಗಿ ಸುಮ್ಮನಾದೆ.

ಮನೆಯ ಹೆಂಗಸರನ್ನು ಕೇಳಿ ಭವಿಷ್ಯದ ನಿರ್ಧಾರಗಳನ್ನು ತೆಗೆದು ಕೊಳ್ಳುವಂಥ ದುರ್ಗತಿ ಹಳ್ಳಿಮನೆ ವಂಶಕ್ಕೆ ಇನ್ನೂ ಬಂದಿಲ್ಲ... ಸುಮ್ಮನಿದ್ದರೆ ಎಷ್ಟು ಮಾತಾಡ್ತ್ಯಾ... ಗಂಡನಿಗೆ, ಅವನ ವಂಶಕ್ಕೆ ಶ್ರೇಯಸ್ಸಾಗಲಿ ಎಂದು ಪೂಜೆ ಮಾಡಿ, ಅಡಿಗೆ ಮನೆ ನೋಡಿಕೊಂಡು ಮಕ್ಕಳನ್ನು ಸಲುಹಿದರೆ ಸಾಕು... ಗಂಡಸರಿಗೆ ಬುದ್ಧಿ ಹೇಳುವ ದಾಷ್ಟಿಕ ಬೇಡ..

ಹೇಳುವುದೆಲ್ಲಾ ಹೇಳಿ... ನನ್ನ ಉತ್ತರಕ್ಕೆ ಕಾಯದೆ ಹಾಲಿನತ್ತ ನಡೆದರು ಮಾವ.

ಏಳು ಗಂಟೆ ನ್ಯೂಸಿನಲ್ಲಿ ಸುದ್ದಿ ಬರಬಹುದು, ಎಲ್ಲರೂ ನೋಡಬೇಕು... ಶ್ರೀ ಲಕ್ಷ್ಮೀ.... ನೆನಪಿರಲಿ...

ಗೌರಿ ಪೂಜೆ ಮಾಡಿ, ಅವರಿಂದ ಇಷ್ಟು ಅನ್ನಿಸಿಕೊಂಡ್ಯಲ್ಲ... ನಿನ್ನ ಬುದ್ಧಿಗಿಷ್ಟು... ನನ್ನ ಹೆಸರು ಹಿಡಿದು ಕರೆದು ಹೇಳಿದ್ರು.. ಅಂದ ಮೇಲೆ ನನ್ನ ಮೇಲೂ ಕೋಪ ಬಂದಿದೆ ಅವರಿಗೆ.. ಅತ್ತೆ... ಅತ್ತೆ... ಕೇಳಿದ್ರಾ ... ವಿಕ್ರಮ ಆಳುವ ಪಕ್ಷ ಸೇರ್ತಾನಂತೆ ... ಮಂತ್ರಿ ಆಗಬಹುದು ನಿಮ್ಮ ಮೊಮ್ಮಗ....

ಕೋಲನ್ನು ಕೋಣೆಯಲ್ಲೇ ಬಿಟ್ಟು ಆಚೆ ಬಂದ ಅಜ್ಜಿಯ ಮುಖದ ತುಂಬಾ ನಗು, ಸಂತಸ.

ರಾಜ ನನ್ನ ಮೊಮ್ಮಗ! ಈಗ ಮಂತ್ರಿ ಆಗೋದು ಅಂದ್ರೆ ಏನೇ?

ಈಗಿನ ಕಾಲಕ್ಕೆ ಮಂತ್ರಿಗಳೇ ರಾಜರು. ಮಾವನವರು, ಇವ್ರು ದುಡ್ಡು ಸಂಪಾದಿಸಿ ಇಟ್ರು, ಇವ್ನು ಅಧಿಕಾರ ಕೈಗೆ ತೊಗೋತಾನೆ... ಶಾಸ್ತ್ರಿಗಳನ್ನ ಕರೆಸಿ ಒಂದು ಗಣೇಶನ ಹೋಮ, ನವಗ್ರಹ ಹೋಮ ಮಾಡಿಸ್ತೀನಿ, ಸರಿಯಲ್ವಾ ಅತ್ತೆ...

ಹೂಂ... ಮಾಡ್ಸು...ಇವತ್ತು ಪಂಚಮಿ... ದಶಮಿ ದಿನ ಮಾಡ್ಸು... ಒಳ್ಳೇದಾಗುತ್ತೆ.

ಅವರಿಬ್ಬರ ಸಂತಸದಲ್ಲಿ ಭಾಗಿಯಾಗಲಾರದೆ ನನ್ನ ಕೋಣೆಗೆ ಬಂದು ಹಾಸಿಗೆಯ ಮೇಲೆ ಕುಸಿದೆ. ನಿನ್ನೆ ಇವರು ಹೊರಟಾಗ ನಾನು ರಾಜಕೀಯ ಬೇಡ ಅಂದೆ... ನನ್ನ ಮಾತು ಕೇಳಿ ಅಂದೆ ...ನಿನ್ನ ಮಾತು ನನಗೆ ತೃಣಕ್ಕೆ ಸಮ... ಎಂದು ನನಗೆ ಹೇಳಲೆಂಬಂತೆ ಇವತ್ತೇ ನಿರ್ಧಾರ ತೊಗೊಂಡಿದ್ದಾರೆ... ಇವರೆಲ್ಲರಿಗೂ ಖುಷಿ...

ಹಚ್ಚಿಕೊಂಡರೆ ಬೇಸರ... ಬಿಟ್ಟರೆ ಸುಖ ... ಎಲ್ಲಾ ಬಿಟ್ಟು ವೈರಾಗ್ಯ ಬೆಳೆಸಿಕೊಳ್ಳೋ ವಯಸ್ಸೇ ನಂದು? ...

ನೋಡು... ಇವ್ರು ಕರೀತಿದ್ದಾರೆ...

ಕೆಳಗಿನಿಂದ ಅತ್ತೆ ಕರೆದಾಗ ಎದ್ದು ಕೋಣೆಯಿಂದ ಹೊರಬಂದು ರೈಲಿಂಗ್ ಹಿಡಿದು ನಿಂತೆ...

### ಬೆಂಗಳೂರಿಗೆ ಹೊರಡಲು ಒತ್ತಾಯ

ಕೆಳಗೆ ಬಾ...ಅದೇನು ಅಲ್ಲೇ ನಿಂತ್ಕೊಂಡು...

ಬೇಡ ಬಿಡು, ಸೀರೆ ಉಟ್ಕೊಂಡು ಸಿದ್ಧವಾಗು. ವಿಕ್ರಮ ಫೋನ್ ಮಾಡಿದ್ದ ... ನಾನು ನೀನು ಬೆಂಗಳೂರಿಗೆ ಹೋಗಬೇಕು... ಪತ್ರಿಕಾ ಗೋಷ್ಠಿಯಲ್ಲಿ ಮಿಸೆಸ್ ಇರ್ಲಿ... ಇಮೇಜ್‌ಗೆ ಒಳ್ಳೆಯದು ಎಂದು ಮುಖ್ಯಮಂತ್ರಿಗಳು ಹೇಳಿದ್ದಾರಂತೆ, ಇನ್ನರ್ಧ ಗಂಟೇಲಿ ಹೊರಡಬೇಕು...

ಅಯ್ಯೋ...ಇವತ್ತಿಂದ ಡಾಲ್ ಮೇಕಿಂಗ್ ಕ್ಲಾಸು... ನಮ್ಮ ಸ್ತ್ರೀ ಸಂಘಟನೆಯಲ್ಲಿ ... ನಾನು...

ನನ್ನ ಮಾತು ಕೇಳಿಸಿಕೊಳ್ಳುವ ತಾಳ್ಮೆ, ವ್ಯವಧಾನವೆಲ್ಲಿ?

ಇನ್ನರ್ಧ ಗಂಟೆಯಲ್ಲಿ ಹೊರಡಬೇಕು... ಇವತ್ತು ರಾತ್ರಿ ಇಲ್ಲಾ ನಾಳೆ ಹಿಂತಿರುಗೋದು... ಸರಿಯಾಗಿ ಪ್ಯಾಕ್ ಮಾಡ್ಕೋ...ಶ್ರೀಲಕ್ಷ್ಮೀ .. ನಿಂಗಿ ಕೈಲಿ ಡ್ರೈವರ್‌ಗೆ ಸಿದ್ಧವಾಗೋಕೆ ಹೇಳು... ದೊಡ್ಡ ಗಾಡಿಯ ಕೀಸ್ ಕೊಡು... ಬೆಂಗಳೂರಿನಲ್ಲಿ ಆ ಕೃಷ್ಣಮೂರ್ತಿಗೆ ಫೋನ್ ಮಾಡಿ...ನಮ್ಮ ಫ್ಲ್ಯಾಟ್ ಕ್ಲೀನ್ ಆಗಿದ್ಯ ನೋಡಿ ಮಾಡ್ಲೋಕೆ ಹೇಳು...

ಅಬ್ಬಬ್ಬಾ...! ಎಷ್ಟು ಹೇಳು, ಮಾಡುಗಳು...! ನಂಗೆಲ್ಲಾ ಗೊತ್ತು... ಮಾಡ್ತೀನಿ ನೀವು ಸಿದ್ಧರಾಗಿ... ಫ್ಲ್ಯಾಟಿನ ಯೋಚನೆ ಯಾಕೆ... ವಿಕ್ರಮ ನಿನ್ನೆಯೇ ಹೋಗಿದಾನಲ್ಲ... ಕೃಷ್ಣಮೂರ್ತಿ ಕ್ಲೀನ್ ಮಾಡ್ತಿರ್ತಾನೆ...

ಸರಿ... ನಿನ್ನ ಮಗ ಫ್ಲ್ಯಾಟಿಗೆ ಯಾಕೆ ಹೋಗಿರ್ತಾನೆ? ಯಾವುದೋ ಫೈವ್ ಸ್ಟಾರ್ ಹೋಟೆಲ್ನಲ್ಲಿ ಇರ್ತಾನೆ...

ಏನು ನಿಂತಿದ್ಯಾ ... ರೆಡಿಯಾಗು... ಮಕ್ಕಳ ಯೋಚನೆ ಬೇಡ, ನಾನಿರ್ತೀನಲ್ಲ... ಅತ್ತೆ ತಲೆ ಮೇಲೆತ್ತಿ ಕಣ್ಣರಳಿಸಿದರು.

ಇಲ್ಲ ನಾನು ಬರೋಲ್ಲ... ನಾನು ಅಷ್ಟು ಬೇಡ ಅಂದರೂ ರಾಜಕೀಯಕ್ಕೆ ಸೇರುತ್ತಿರುವ ಇವರ ಹಿಂದೆ ನಾನು ಇರೋಲ್ಲ, ನನ್ನ ಮಾತಿಗೆ, ಅಭಿಪ್ರಾಯಕ್ಕೆ, ಇರುವಿಗೂ ಬೆಲೆಯೇ ಕೊಡದ ಇವರ ಪತ್ರಿಕಾಗೋಷ್ಠಿಯಲ್ಲಿ ನಾನೇಕೆ?

ಈ ಮಾತು ಹೊರಬರಲಿಲ್ಲ... ಎದೆಯಲ್ಲೇ ಹುದುಗಿಕೊಂಡ ಮಾತುಗಳಿವು. ಮಾತು ಆಡಿದರೆ ಕೊನೆಯವರೆಗೂ ತೆಗೆದುಕೊಂಡು ಹೋಗುವ ತಾಕತ್ತಿರಬೇಕು. ಆ ತಾಕತ್ತಿಗೆ ಆಸರೆ ಬೇಕು... ತೌರಿನ, ವಿದ್ಯೆಯ, ಹಣದ, ಪ್ರೀತಿಯ... ಯಾವುದಾದರೂ ... ಭಿಕಾರಿ ನಾನು... ಕೈಗೆ ಸಿಕ್ಕ ಎರಡು ಸೀರೆ, ಇತ್ಯಾದಿಗಳನ್ನು ಕಿಟ್ ಬ್ಯಾಗೊಂದಕ್ಕೆ ಹಾಕಿಕೊಂಡು ಕೆಳಗಿಳಿದು ಬಂದೆ.

ಅತ್ತೆ... ಇವತ್ತಿನ ಕ್ಲಾಸಿನ ಬಗ್ಗೆ ಕೊಂಚ ವಿವರಣೆ ಕೊಟ್ಟು ಬರ್ತೀನಿ. ಮಾವನವರಿಗೆ ಬಂದು ಬಿಡ್ತೀನಿ ಎಂದು ಹೇಳಿ... ಉತ್ತರಕ್ಕೆ ಕಾಯದೆ ಹೊರ ನಡೆದೆ.

ಬಾಗಿಲ ಬಳಿ ನರಹರಿಯನ್ನು ನೋಡಿ ನಿರಾಳವೆನಿಸಿತು.

(ಸಶೇಷ)